# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 284

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 06-12-2023

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕರ್ನಾಟಕ ರಸ್ತೆ ಸಾರಿಗೆ ನಿಗಮದ ಒಟ್ಟು ನಾಲ್ಕು ನಿಗಮಗಳು ಒಳಗೊಂಡಂತೆ ಇರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು: (ನಿಗಮವಾರು ಸಂಖ್ಯೆ ನೀಡುವುದು)</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ನಿಗಮವಾರು ಇರುವ ಬಸ್‌ಗಳ ಸಂಖ್ಯೆಯ ಮಾಹಿತಿ ಈ ಕೆಳಕಂಡಂತಿದೆ:-
<table>
<tr><th>ಸಂಸ್ಥೆ</th><th>ಡೀಸೆಲ್</th><th>ಜಿಸಿಸಿ (ಎಲೆಕ್ಟ್ರಿಕ್)</th><th>ಒಟ್ಟು</th></tr>
<tr><td>ಕ.ರಾ.ರ.ಸಾ.ನಿಗಮ</td><td>8295</td><td>48</td><td>8343</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>5831</td><td>391</td><td>6222</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>4857</td><td>-</td><td>4857</td></tr>
<tr><td>ಕ.ಕ.ರ.ಸಾ ನಿಗಮ</td><td>4854</td><td>-</td><td>4854</td></tr>
<tr><td>ಒಟ್ಟು</td><td>23837</td><td>439</td><td>24276</td></tr>
</table>
</td></tr>
<tr><td>ಆ.</td><td>ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಶಕ್ತಿ ಯೋಜನೆಯಿಂದ ಪ್ರತಿದಿನ ಪ್ರಯಾಣಿಸುವ ಸರಾಸರಿ ಮಹಿಳೆಯರ ಸಂಖ್ಯೆ ಎಷ್ಟು; ಇದರಿಂದ ನಿಗಮಗಳಿಗೆ ಆಗುವ ಆರ್ಥಿಕ ಹೊರೆ ಎಷ್ಟು; ಮತ್ತು ಈ ಹೊರೆಯನ್ನು ಸರ್ಕಾರ ಭರಿಸುವುದೇ;</td><td>ಶಕ್ತಿ ಯೋಜನೆಯಡಿ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಪ್ರತಿದಿನ ಪ್ರಯಾಣಿಸುವ ಮಹಿಳೆಯರ ಸರಾಸರಿ ಸಂಖ್ಯೆ ಹಾಗೂ ಇದರಿಂದ ಪ್ರತಿದಿನಕ್ಕೆ ಉಂಟಾಗುವ ಅಂದಾಜು ಆರ್ಥಿಕ ಹೊರೆ ಈ ಕೆಳಕಂಡಂತಿದೆ:-
<table>
<tr><th>ಸಂಸ್ಥೆ</th><th>ದಿನವಹಿ ಮಹಿಳಾ ಪ್ರಯಾಣಿಕರು (ಲಕ್ಷಗಳಲ್ಲಿ)</th><th>ದಿನವಹಿ ಆರ್ಥಿಕ ಹೊರೆ (ರೂ. ಕೋಟಿಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>18.34</td><td>5.86</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>19.98</td><td>2.56</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>14.20</td><td>3.64</td></tr>
<tr><td>ಕ.ಕ.ರ.ಸಾ ನಿಗಮ</td><td>8.57</td><td>2.86</td></tr>
<tr><td>ಒಟ್ಟು</td><td>61.09</td><td>14.92</td></tr>
</table>
ಪ್ರಸ್ತುತ ಸಾಲಿನಲ್ಲಿ ಶಕ್ತಿ ಯೋಜನೆಯಡಿ ನಿಗದಿಪಡಿಸಿರುವ ಒಟ್ಟು ರೂ.2800.00 ಕೋಟಿಗಳ ಅನುದಾನದಲ್ಲಿ ಪ್ರತಿ ಮಾಹೆಯ ವಾಸ್ತವಿಕ ವೆಚ್ಚಕ್ಕನುಗುಣವಾಗಿ ಅನುಪಾತದನ್ವಯ ಸಾರಿಗೆ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ.</td></tr>
</table>

<table>
<tr>
<td>ಇ.</td>
<td>ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೌಕರರು ವೇತನ ಪರಿಷ್ಕರಣೆಗಾಗಿ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ದಿನಾಂಕದಿಂದ ಮತ್ತು ಎಷ್ಟು ಶೇಕಡಾ ವೇತನ ಹೆಚ್ಚಿಸಲಾಗುವುದು ಮತ್ತು ಇದರಿಂದಾಗುವ ಆರ್ಥಿಕ ಹೊರೆ ಎಷ್ಟು; (ನಿಗಮವಾರು ಸಂಖ್ಯೆ ನೀಡುವುದು)</td>
<td>
ಸಾರಿಗೆ ಸಂಸ್ಥೆಗಳ ನೌಕರರು ವೇತನ ಪರಿಷ್ಕರಣೆಗಾಗಿ ಹೋರಾಟ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ನಿಗಮಗಳ ಆರ್ಥಿಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರದ ಅನುಮೋದನೆ ಪಡೆದು ವೇತನ ಪರಿಷ್ಕರಣೆಯನ್ನು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಅದರಂತೆ ದಿನಾಂಕ:01.03.2023ರಿಂದ ಜಾರಿಗೆ ಬರುವಂತೆ ಮೂಲ ವೇತನವನ್ನು ಶೇ.15ರಷ್ಟು ಹೆಚ್ಚಿಸಿ ವೇತನ ಪರಿಷ್ಕರಣೆ ಮಾಡಲಾಗಿದೆ.
ವೇತನ ಪರಿಷ್ಕರಣೆಯಿಂದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಮಾಹೆಯಾನ ಉಂಟಾಗಿರುವ ಹೆಚ್ಚುವರಿ ಆರ್ಥಿಕ ಹೊರೆಯ ಮಾಹಿತಿ ಈ ಕೆಳಕಂಡಂತಿದೆ:
(ರೂ. ಕೋಟಿಯಲ್ಲಿ)
<table>
<tr><th>ಸಂಸ್ಥೆಗಳು</th><th>ಆರ್ಥಿಕ ಹೊರೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>17.95</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>12.59</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>10.75</td></tr>
<tr><td>ಕ.ಕ.ರ.ಸಾ ನಿಗಮ</td><td>10.50</td></tr>
<tr><td>ಒಟ್ಟು</td><td>51.79</td></tr>
</table>
</td>
</tr>
<tr>
<td>ಈ.</td>
<td>ಈಗಾಗಲೇ ನಷ್ಟದಲ್ಲಿರುವ ಎಲ್ಲಾ ಸಾರಿಗೆ ನಿಗಮಗಳು ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಶಕ್ತಿ ಯೋಜನೆ ಮತ್ತು ನೌಕರರ ವೇತನ ಪರಿಷ್ಕರಣೆಯಿಂದ ಆಗುವ ಆರ್ಥಿಕ ಹೊರೆಯನ್ನು ನಿಭಾಯಿಸಲು ನಿಗಮಗಳಿಗೆ ಕಷ್ಟಸಾಧ್ಯವಾಗಿದ್ದು, ಸದರಿ ಆರ್ಥಿಕ ಹೊರೆಯನ್ನು ಸರ್ಕಾರ ಭರಿಸುವುದೇ; ಇದಕ್ಕೆ ಸಂಪನ್ಮೂಲ ಹೊಂದಿಸುವ ಮಾರ್ಗ ಯಾವುದು? (ಸಂಪೂರ್ಣ ಮಾಹಿತಿ ನೀಡುವುದು)</td>
<td>
ಶಕ್ತಿ ಯೋಜನೆಯಡಿ ಉಂಟಾಗುವ ವೆಚ್ಚವನ್ನು ಸಾರಿಗೆ ನಿಗಮಗಳಿಗೆ ಮರುಪಾವತಿಸುವ ಸಲುವಾಗಿ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸೇರಿದಂತೆ 2023-24ನೇ ಸಾಲಿನ ಆಯವ್ಯಯದಲ್ಲಿ ರೂ.2800.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ನಿಗಮವಾರು ಬಿಡುಗಡೆಗೊಳಿಸಿರುವ ವಿವರ ಕೆಳಕಂಡಂತಿದೆ:
(ರೂ.ಲಕ್ಷಗಳಲ್ಲಿ)
<table>
<tr><th>ನಿಗಮ</th><th>ಬಿಡುಗಡೆಗೊಳಿಸಿರುವ ಅನುದಾನ</th></tr>
<tr><td>ಕ.ರಾ.ರ.ಸಾ.ನಿಗಮ</td><td>62511.66</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>29465.09</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>41746.46</td></tr>
<tr><td>ಕ.ಕ.ರ.ಸಾ ನಿಗಮ</td><td>33221.78</td></tr>
<tr><td>ಒಟ್ಟು</td><td>166945.00</td></tr>
</table>
</td>
</tr>
</table>

| | | |
|---|---|---|
| | | ಆರ್ಥಿಕ ಹೊರೆಯನ್ನು ನಿಭಾಯಿಸಲು ಸಾರಿಗೆ ಸಂಸ್ಥೆಗಳಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ:-<br>❖ ಶಕ್ತಿ ಯೋಜನೆ ಜಾರಿಯಾದ ನಂತರ ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಅದಕ್ಕನುಗುಣವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಾಹನಗಳನ್ನು ಕಾರ್ಯಾಚರಿಸಿ ಹೆಚ್ಚಿನ ಸಾರಿಗೆ ಆದಾಯ ಸಂಗ್ರಹಿಸಲು ನಿರಂತರವಾಗಿ ಶ್ರಮಿಸಲಾಗಿತ್ತಿದೆ.<br>❖ ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ ಅನುಸೂಚಿಗಳ ಕಾರ್ಯಾಚರಣೆಗೆ ಯೋಜನೆ ರೂಪಿಸಲಾಗಿದೆ.<br>❖ ಮಾನವ ಉತ್ಪಾದಕತೆಗೆ ಅಡ್ಡಿಯಾಗುತ್ತಿದ್ದ ಕೆಲವೊಂದು ವಿಷಯಗಳಲ್ಲಿ ತಂತ್ರಾಂಶಗಳನ್ನು ಅಳವಡಿಸಿ ಮಾನವ ಉತ್ಪಾದಕತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ- 1) ಡ್ಯೂಟಿರೋಟಾ 2) ಗಣಕೀಕೃತ ರಜೆ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.<br>❖ ಸಂಸ್ಥೆಗಳ ಸಾರಿಗೆಗಳನ್ನು ಜನಸ್ನೇಹಿಯಾಗಿಸಲು ಮತ್ತು ನಗದು ರಹಿತ ವಹಿವಾಟುಗಳನ್ನು ಉತ್ತೇಜಿಸಲು ವಾಹನಗಳಲ್ಲಿ UPI ಪಾವತಿಗಳ ಮೂಲಕ ಟಿಕೇಟ್ ವಿತರಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>❖ ಸಂಸ್ಥೆಗಳ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ಖಾಲಿ ನಿವೇಶನ/ಹಳೆ ಕಟ್ಟಡಗಳನ್ನು ಪರವಾನಗಿ ನೀಡಿ, ಆದಾಯ ಕ್ರೋಢೀಕರಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.<br>❖ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ ಆದಾಯ ವೃದ್ಧಿಗೆ "ನಮ್ಮ ಕಾರ್ಗೋ" ಪಾರ್ಸಲ್ ಸೇವೆಯನ್ನು ಆರಂಭಿಸಲಾಗಿದೆ<br>❖ ಬಸ್ಸುಗಳ ಮೇಲೆ ಜಾಹೀರಾತು, ಬಸ್ ನಿಲ್ದಾಣಗಳಲ್ಲಿ ಹೋರ್ಡಿಂಗ್ಸ ಅಳವಡಿಕೆ, ಡಿಜಿಟಲ್ ಗ್ಲೋಸೈನ್ ಬೋರ್ಡ್, ವಿಡಿಯೋವಾಲ್ ಅಡ್ವರ್ಟೈಜ್‌ಮೆಂಟ್‌ಗಳ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ. |

ಸಂಖ್ಯೆ: ಟಿಡಿ 177 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು